**Shikshan Sanshodhan : Journal of Arts, Humanities and Social Sciences** ISSN(o): 2581-6241
**Monthly, Peer-Reviewed, Refereed, Indexed Journal** Impact Factor: 6.471
**Volume - 6, Issue - 4, April - 2023** Publication Date: 30/04/2023

DOIs:10.2018/SS/202304016 --:-- Research Paper / Article / Review

# ಭಾರತದ ಸ್ವಾತಂತ್ರ್ಯಯ ಸಂಗ್ರಾಮದಲ್ಲಿ ಸುರಪುರದ ರಾಜಾ ವೆಂಕಟಪ್ಪನಾಯಕ

**ಧರ್ಮರಾಯ**
**ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ,**
**ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ, ಕರ್ನಾಟಕ.**
**ಇಚಿಚಿಟ – ಜಇಝುಚಿತಿಚಿಟಜಚಿಡಿ@ಉಚಿಚಿ.ಛಿಡು**

**ಸಾರಾಂಶ (Abstract):** ಭಾರತದಲ್ಲಿ ಬ್ರಿಟಿಷರು ತಮ್ಮ ಅಧಿಕಾರ ವಿಸ್ತರಣೆ ಉದ್ದೇಶದಿಂದ ಸಹಾಯಕ ಸೈನ್ಯೆ ಪದ್ಧತಿ ಮತ್ತು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಗಳನ್ನು ಜಾರಿಗೆ ತಂದರು. ಈ ನೀತಿಗಳಿಂದ ಹಲವು ಸಂಸ್ಥಾನಗಳು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟವು. ಇದರಿಂದಾಗಿ ಭಾರತೀಯರು ಬ್ರಿಟಿಷರ ಆಡಳಿತದ ವಿರುದ್ಧ ದಂಗೆ ಎದ್ದರು. ಈ ದಂಗೆವು ೧೮೫೭ ರಲ್ಲಿ ಮಹಾಕ್ರಾಂತಿರೂಪದಲ್ಲಿ ಸ್ಫೋಟಿಸಿತ್ತು. ಇದನ್ನು “೧೮೫೭ ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ”, ಅಥವಾ “ಸಿಪಾಯಿ ದಂಗೆ” ಎಂದು ಕರೆಯುತ್ತಾರೆ. ಇದು ಭಾರತದ ಚರಿತ್ರೆಯಲ್ಲಿ ಸ್ಮರಣಾರ್ಹವಾದ ಘಟನೆ. ಇದು ಏಕಾ ಏಕೀ ನಡೆದ ಘಟನೆಯಲ್ಲ. ಬ್ರಿಟಿಷರ ಸಾಮ್ರಾಜ್ಯಶಾಹೀ ನೀತಿ, ಆರ್ಥಿಕ ಶೋಷಣೆ, ಆಡಳಿತದಲ್ಲಿ ಸ್ಥಳೀಯ ಅರಸರು, ಜಮೀನ್ದಾರರು, ವರ್ತಕರು, ರೈತರು ಮತ್ತು ಜನಸಾಮಾನ್ಯರನ್ನು ನಡೆಸಿಕೊಂಡ ರೀತಿಯಿಂದಾಗಿ ಭಾರತೀಯರೆಲ್ಲರೂ ಕಂಗೆಟ್ಟರು. ಹಿಂದು–ಮುಸ್ಲಿಂರೆಂಬ ಭೇಧಭಾವವಿಲ್ಲದೆ, ಎಲ್ಲರೂ ಒಂದಾಗಿ ಬ್ರಿಟಿಷರ ವಿರುದ್ಧ ದೇಶದಾದ್ಯಂತ ವ್ಯಾಪಕವಾಗಿ ಈ ಕ್ರಾಂತಿಯ ಕಿಡಿ ಹರಡಿತು. ಪ್ರಸ್ತುತ ಈ ಲೇಖನದಲ್ಲಿ ೧೮೫೭ ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚನ್ನು ದಕ್ಷಿಣದೆಡೆಗೆ ತಂದ ಕೀರ್ತಿ ಮಹಾನ್ ಕ್ರಾಂತಿವೀರ ಸುರಪುರದ ರಾಜಾ ವೆಂಕಟಪ್ಪನಾಯಕನಿಗೆ ಸಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಅವರ ಜೀವನ ಮತ್ತು ಹೋರಾಟದ ಕುರಿತು ಚರ್ಚಿಸಲಾಗಿದೆ.

**ಮುಖ್ಯಪದಗಳು (keywords) :** ಬ್ರಿಟಿಷರು, ಸ್ವಾತಂತ್ರ್ಯ, ಸಂಗ್ರಾಮ, ಸುರಪುರ, ಬೇಡ, ನಾಯಕ.

ಭಾರತದಲ್ಲಿ ವಸಾಹತುಶಾಹಿ ಆಳ್ವಿಕೆ ಆರಂಭವಾದಾಗಿನಿಂದ ಜನರು ವಿಭಿನ್ನ ಹೋರಾಟಗಳಲ್ಲಿ ಪ್ರತಿಭಟಿಸುತ್ತಾ ದೇಶದ ಸಾರ್ವಭೌಮತ್ವದ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರತಿಯೊಬ್ಬ ವೀರ ಯೋಧರೇ ಸ್ವಾತಂತ್ರ್ಯ ಹೋರಾಟಗಾರರು. ಜಾಗತಿಕ ಮಟ್ಟದಲ್ಲಿ ಯಾವುದೇ ರಾಷ್ಟ್ರವು ಒಂದೇ ಬಾರಿಗೆ ಪ್ರವರ್ಧಮಾನಕ್ಕೆ ಬಂದಿಲ್ಲ. ಇದನ್ನು ಇತಿಹಾಸ ನಮಗೆ ತಿಳಿಯಪಡಿಸುತ್ತದೆ. ಅಲ್ಲಿನ ಭೌಗೋಳಿಕ ಪರಿಸ್ಥಿತಿ ಕೂಡ ರಾಷ್ಟ್ರದ ಮೇಲೆ ಪರಿಣಾಮ ಬೀರುತ್ತದೆ. ತನ್ನ ಮೂಲಭೂತ ಬೇಡಿಕೆಗಳನ್ನು ಇಡೇರುಸಿಕೊಳ್ಳವುದರ ಜೊತೆಗೆ ಆರ್ಥಿಕವಾಗಿ ಸದೃಢವಾಗಲು ಬಯಸುತ್ತವೆ. ಕಾಲಕ್ರಮೇಣವಾಗಿ ಪ್ರಬಲ ರಾಷ್ಟ್ರಗಳು ಬಲಹೀನ ರಾಷ್ಟ್ರಗಳ ಮೇಲೆ ಬಲಪ್ರಯೋಗ ಮತ್ತು ಹೆಜೆಮೋನಿ ಮುಖಾಂತರ ಒತ್ತಡ ತರುತ್ತವೆ. ಇಂತಹ ಪ್ರವೃತ್ತಿಗೆ ಯುರೋಪಿನ ರಾಷ್ಟ್ರಗಳು ಮುಂಚೂಣಿಯಲ್ಲಿವೆ. ಅದರಂತೆಯೇ ಕೇವಲ ವ್ಯಾಪಾರ ದೃಷ್ಟಿಯಿಂದ ಬಂದ ಯುರೋಪಿಯನ್ನರು ಭಾರತವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಆಡಳಿತವನ್ನು ನಡೆಸತೊಡಗಿದರು. ಇದರಿಂದ ಆಕ್ರಮಣಕಾರರು ಈ ದೇಶದ ಸಂಪತ್ತನ್ನು ಮಾತ್ರ ದೋಚಲಿಲ್ಲ, ಅವರು ಈ ನೆಲದ ಸಂಸ್ಕೃತಿ, ಭಾಷೆ, ಕಲೆ, ದೇವಾಲಯಗಳನ್ನು ನಾಶ ಮಾಡಿದರು. ಅದರಲ್ಲೂ ಮುಖ್ಯವಾಗಿ ಬ್ರಿಟಿಷರು ದೇಶದ ಹಲವು ಭಾಗಗಳನ್ನು ಆವರಿಸಿ ವಶಪಡಿಸಿಕೊಳ್ಳತ್ತಲೇ ಸಾಗಿದರು.

೧೭೫೭ರ ಪ್ಲಾಸಿ ಕದನದಲ್ಲಿ ಸಿರಾಜುದ್ದೌಲನನ್ನು ಸೋಲಿಸಿ ಬಂಗಾಳದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಸ್ಥಾಪಿಸಿ ಹಂತ ಹಂತವಾಗಿ ಇಡೀ ಭಾರತವನ್ನೆ ಜಯಿಸಿದರು. ಭಾರತವನ್ನು ಬಹುಪಾಲು ಬ್ರಿಟಿಷರು ತಮ್ಮ ಕೈವಶ ಮಾಡಿಕೊಂಡು ಭಾರತೀಯರನ್ನು ಗುಲಾಮಗಿರಿಗೆ ತಳ್ಳಿದರು. ಇದರಿಂದಾಗಿ ದೇಶದ ಜನರು ಸ್ವಾತಂತ್ರ್ಯವನ್ನು ಬಯಸಿದರು. ಇದರ ಪರಿಣಾಮವಾಗಿ ಉದಯಿಸಿದ ಹೋರಾಟ ದೇಶದ ಉದ್ದಗಲಕ್ಕೂ ವಿಸ್ತರಿಸಿ ಕಾಳ್ಗಿಚ್ಚಿನಂತೆ ಹರಡಿಕೊಂಡಿತು. ಇಂತಹ ಹೋರಾಟಗಳನ್ನು ಎರಡು ರೀತಿಯಲ್ಲಿ ನೋಡಬಹುದು. ಒಂದು ೧೮೫೭ರ ಪೂರ್ವದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿ ಹಾಡಿದವರಲ್ಲಿ ರಾಜ ಮಹಾರಾಜರು, ರಾಣಿ ಮಹಾರಾಣಿರು, ಪಾಳೇಗಾರರು ಮತ್ತು ಬುಡಕಟ್ಟು ಜನಾಂಗದವರು ನಡೆಸಿದ ಹೋರಾಟ ಮತ್ತೊಂದು ೧೮೫೭ರ ನಂತರದ ಇತಿಹಾಸದಲ್ಲಿ ಲಾಲ, ಬಾಲ, ಪಾಲರ ಹೋರಾಟ, ಚಂದ್ರಶೇಖರ ಆಜಾದ್, ಭಗತ್ ಸಿಂಗ್, ರಾಜಗುರು, ಸುಖದೇವ್ ರವರು ನಡೆಸಿದ ಕ್ರಾಂತಿಕಾರಿ ಹೋರಾಟ, ನೇತಾಜಿ, ಗೋಪಾಲಕೃಷ್ಣ ಗೋಖಲೆ, ಚಿತ್ತರಂಜನ ದಾಸ್, ನೆಹರು ಮತ್ತು ಗಾಂಧೀಜಿ ನೇತೃತ್ವದಲ್ಲಿ ನಡೆದ ಹೋರಾಟಗಳು ಬಹುದೊಡ್ಡ ಪ್ರಮಾಣದಲ್ಲಿ ಬ್ರಿಟಿಷರ

ವಿರುದ್ಧ ದೇಶವ್ಯಾಪಿಯಾಗಿ ಹೋರಾಟದ ಕಿಚ್ಚು ಹರಡಿತು. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದ ಕಿಚ್ಚನ್ನು ದಕ್ಷಿಣದೆಡೆಗೆ ತಂದ ಕೀರ್ತಿ ಮಹಾನ್ ಕ್ರಾಂತಿವೀರ ಸುರಪುರದ ರಾಜಾ ವೆಂಕಟಪ್ಪನಾಯಕನಿಗೆ ಸಲ್ಲುತ್ತದೆ. ಈ ಹಿನ್ನೆಲೆಯಲ್ಲಿ ಅವರನ್ನು ಸ್ಮರಿಸಿಕೊಳ್ಳುತ್ತ ಅವರ ಹೋರಾಟವನ್ನು ತಿಳಿದುಕೊಳ್ಳೋಣ.




ಇಂದಿನ ಕಲ್ಯಾಣ ಕರ್ನಾಟಕದ (ಹೈದ್ರಾಬಾದ್ ಕರ್ನಾಟಕ) ಭಾಗವಾದ ಸಗರನಾಡಿನ ಖ್ಯಾತ ಗೋಸಲ ಸಂಸ್ಥಾನ ಸುರಪುರ. ಸುರಪುರನ್ನು ಪ್ರಾರಂಭದಲ್ಲಿ ಶೋರಾಪೂರ ಎಂದು ಕರೆಯುತ್ತಿದ್ದರು. ಇಂದು ಇದು ಯಾದಗಿರಿ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದೆ. ಸುರಪುರ ಸಂಸ್ಥಾನ ಕೆಲಕಾಲ ವಿಜಯಪುರ, ಗೋಲ್ಕುಂಡದ ನವಬರ ಊಳಗದಲ್ಲಿತ್ತು. ಮೊಘಲ ಸಾಮ್ರಾಜ್ಯದ ಪ್ರಸಿದ್ಧ ದೊರೆ ಔರಂಗಜೇಬನ ವಿರುದ್ಧ ಸುರಪುರದ ಅರಸರು ಹೋರಾಡಿದ್ದು ಅವಿಸ್ಮರಣೀಯವಾದದ್ದು. ಯಾದಗಿರಿ ಜಿಲ್ಲೆಯಲ್ಲಿರುವ ಈ ಪ್ರದೇಶ ವಿಜಯನಗರ ಸಾಮ್ರಾಜ್ಯ ಅದ:ಪತನದ ತರುವಾಯ ಬೇಡರ ನಾಡಾಯಿತು. ಸುರಪುರದ ಬೇಡರು ಶೌರ್ಯ ಪರಾಕ್ರಮಗಳಿಗೆ ಹೆಸರಾಗಿದ್ದು, ಅಲ್ಲಿನ ಜನತೆ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದರು. ಸ್ವಾತಂತ್ರ್ಯ ಸ್ವರಾಜ್ಯ ಮತ್ತು ಸ್ವಧರ್ಮದ ಸಂರಕ್ಷಣೆಗಾಗಿ ಆಂಗ್ಲರ ವಿರುದ್ಧ ಹೋರಾಡಿದ ಸುರಪುರ ಸಂಸ್ಥಾನದ ಕೊನೆಯ ಅರಸ ಮಹಾನ್ ಕ್ರಾಂತಿವೀರ ರಾಜಾ ವೆಂಕಟಪ್ಪನಾಯಕ ಕ್ರಿ.ಶ.೧೮೩೪ರಲ್ಲಿ ಜನಿಸಿದನು. ವೆಂಕಟಪ್ಪ ನಾಯಕನು ಕೇವಲ ಎಂಟು ವರ್ಷದವನಿದ್ದಾಗಲೇ ತಂದೆಯಾದ ಕೃಷ್ಣಪ್ಪನಾಯಕನು ಮರಣ ಹೊಂದಿದನು. ಆಗ ಸುರಪುರಕ್ಕೆ ಅನೇಕ ಕಡೆಗಳಿಂದ ಉಪಟಳವಿತ್ತು. ಒಂದು ಕಡೆ ಬ್ರಿಟಿಷರ ಉಪಟಳ ಮತ್ತೊಂದು ಕಡೆ ಹೈದ್ರಾಬಾದ್ ನಿಜಾಮ. ಇಂತಹ ಸಮಯದಲ್ಲಿ ರಾಣಿ ಈಶ್ವರಮ್ಮ ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡಳು. ಇದನ್ನು ಸಹಿಸದ ಕೃಷ್ಣಪ್ಪ ನಾಯಕನ ಬಂಧುಗಳು ಮತ್ತು ಇತರರು ಸೇರಿ ಕೃಷ್ಣಪ್ಪ ನಾಯಕನ ತಮ್ಮನಾದ ಪಿಡ್ಡನಾಯಕನನ್ನು ಬಾಲ ವೆಂಕಟಪ್ಪ ನಾಯಕನ ಪಾಲಕನೆಂದು ತಿಳಿದು ರಾಜ್ಯಭಾರ ವಹಿಸಬೇಕೆಂದು ಹಠ ಹಿಡಿದರು. ಇದಕ್ಕೆ ಆಂಗ್ಲ ಸರಕಾರದ ಒಪ್ಪಿಗೆಯೂ ಇತ್ತು. ಆದರೆ ರಾಣಿ ಈಶ್ವರಮ್ಮ ತನ್ನ ಮೈದುನನಾದ ಪಿಡ್ಡನಾಯಕ ಮತ್ತು ಆಂಗ್ಲ ಸರಕಾರ ಇಬ್ಬರನ್ನೂ ವಿರೋಧಿಸತೊಡಗಿದಳು.

ಈ ಸಮಯದಲ್ಲಿ ನಿಜಾಮನ ಸರ್ಕಾರವು ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾ ಸಂಸ್ಥಾನದ ಮೇಲೆ ಸಾಲದ ಹೊರೆಯನ್ನು ಬಲತ್ಕಾರವಾಗಿ ಹೇರತೊಡಗಿತು. ಬ್ರಿಟಿಷ್ ಅಧಿಕಾರಿಯಾದ ಗ್ರಿಸ್ಲೆಯನ್ನು ಸುರಪುರಕ್ಕೆ ಕಳುಹಿಸಿದರು. ಸಾಲದ ಸಲುವಾಗಿ ಕೆಲವು ಪ್ರದೇಶಗಳನ್ನು ಬಿಟ್ಟುಕೊಡಬೇಕೆಂದು ಹೇಳಿದನು. ಆದರೆ ಸಂಸ್ಥಾನದಲ್ಲಿ ಅಧಿಕಾರ ಮಾಡುತ್ತಿರುವ ರಾಣಿ ಈ ಒಪ್ಪಂದಕ್ಕೆ ಒಪ್ಪಿಕೊಳ್ಳಲಿಲ್ಲ. ಆಡಳಿತದಲ್ಲಿ ಕೈ ಹಾಕಿ ವಿನಾಕಾರಣ ಕಲಹಗಳನ್ನು ಸೃಷ್ಟಿಸುತ್ತಾನೆಂದು ರೆಸಿಡೆಂಟನಿಗೆ ರಾಣಿಯು ಪತ್ರ ಬರೆದಳು. ಇದರಿಂದ ಕ್ಯಾಪ್ಟನ ಗ್ರಿಸ್ಲೆಯು ಸುರಪುರ ಸಂಸ್ಥಾನದಲ್ಲಿ ಸರಿಯಾಗಿ ಆಡಳಿತ ನಿಭಾಯಿಸದೆ ನಿಜಾಮನ ಪರವಾಗಿ ಇದ್ದರಿಂದ ಅವನನ್ನು ಅಧಿಕಾರದಿಂದ ತೆಗೆದು ಹಾಕಲಾಯಿತು. ಇಂತಹ ಸಮಯದಲ್ಲಿ ಮಹಾನ್ ಚಿಂತಕ, ಮೇಧಾವಿ, ರಾಜಕೀಯ ಚತುರ, ದಕ್ಷ ಆಡಳಿತಗಾರ ಇತಿಹಾಸ ಸಂಶೋಧಕನಾದ ಮೆಡೋಸ್ ಟೇಲರನು ಬ್ರಿಟಿಷರ ರಾಜಕೀಯ ಪ್ರತಿನಿಧಿಯಾಗಿ (ಏಜೆಂಟ್) ನೇಮಕಗೊಂಡು ಸುರಪುರ ಸಂಸ್ಥಾನಕ್ಕೆ ಬಂದನು. ಟೆಲರನು ಅಪ್ರಪ್ತನಾದ ರಾಜಾ ವೆಂಕಟಪ್ಪನಾಯಕನನ್ನು ಸಿಂಹಾಸನಾರೋಹಣ ಮಾಡುವುದಾಗಿ ಮತ್ತು ರಾಜನ ಹೆಸರಿನಲ್ಲಿ ಅಧಿಕಾರ ನಡೆಸುವದಾಗಿ ಹೇಳಿ ಆಂಗ್ಲರು ಮತ್ತು ನಿಜಾಮರು ಸುರಪುರ ದೊರೆಗಳ ಸ್ನೇಹಿತರೆಂದು ಘೋಷಿಸಿದನು. ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಸುರಪುರ ಸಂಸ್ಥಾನದ ಕಡೆಯಿಂದ ನಿಜಾಮನಿಗೆ ಕೊಡಬೇಕಾದ ಬಾಕಿ ಹಣ ಏನು ಇಲ್ಲವೆಂದು, ಪ್ರತಿ ವರ್ಷವು ನಿಜಾಮನು ಖಂಡನೀಯ ಹಣವನ್ನು ಹೆಚ್ಚಿಸುತ್ತಾ, ಸುರಪುರ ಸಂಸ್ಥಾನದಿಂದ ಅಕ್ರಮವಾಗಿ ಸುಲಿದ ಸುಮಾರು ೧೧ ಲಕ್ಷ ರೂಪಾಯಿ ಹೆಚ್ಚಿಗೆ ವಸೂಲಿ ಮಾಡಿರುವುದು ಹಿಂದಿರುಗಿಸಬೇಕೆಂದು ಗವರ್ನರ್ ಜನರಲನಿಗೆ ಪತ್ರ ಬರೆದನು. ಅದರಂತೆ ಸುಪ್ರಿಂ ಕೋರ್ಟ್ ಆಜ್ಞೆ ಪಡೆದು, ಸಂಸ್ಥಾನದಿಂದ ವರ್ಷಕ್ಕೆ ಕೇವಲ ೩೦ ಸಾವಿರ ರೂಪಾಯಿ ಮಾತ್ರ ಕೊಡಬೇಕೆಂದು ನಿರ್ಣಯಿಸಲಾಯಿತು. ಇದರಿಂದ ನಿಜಾಮನು ರಾಜ್ಯಾರೋಹಣ ಸಮಯದಲ್ಲಿ ನಜರಾಣಿ ಮತ್ತು ಹಿಂದಿನ ಬಾಕಿಗಳನ್ನು ಬಿಟ್ಟು ಬಿಡಬೇಕಾಯಿತು.

ರೆಸಿಡೆಂಟನಾದ ಜನರಲ್ ಫ್ರೇಜರನು ಗವರ್ನರ್ ಜನರಲ್‌ಗೆ ೧೮–೦೫–೧೮೪೭ ರ ದಿನಾಂಕದಂದು ಪತ್ರದ ಪ್ರತಿಯೊಂದನ್ನು ಟೇಲರನಿಗೆ ಕಳುಹಿಸಿದನು. ಈ ಪತ್ರದಲ್ಲಿ ಪಿಡ್ಡನಾಯಕನ ಅನುಮತಿಯಂತೆ ಬಾಲಕನಾದ ವೆಂಕಟಪ್ಪನಾಯಕನನ್ನು ಸಿಂಹಾಸನದ ಮೇಲೆ ಕೂಡಿಸಿ, ರಾಜಕುಮಾರನ ಮರ್ಯಾದೆಗೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕೆಂದೂ, ರಾಜನು ಪ್ರೌಢ ವಯಸ್ಸಿಗೆ ಬಂದನಂತರ ಸುಸ್ಥಿತಿ, ಸುವ್ಯವಸ್ಥಿತ ರಾಜ್ಯ ಆತನಿಗೆ ಒಪ್ಪಿಸಬೇಕೆಂದೂ ಮತ್ತು ಆತನಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಆಡಳಿತದ ಯೋಗ್ಯ ತರಬೇತಿಯನ್ನು ಕೊಡಿಸುವಂತೆ ಅಭಿಪ್ರಾಯ ಪಟ್ಟಿದ್ದನು. ಇದರಂತೆ ಟೇಲರನು ಎಲ್ಲರನ್ನೂ ಸಂತೋಷಗೊಳಿಸುವುದಕ್ಕಾಗಿ ಬಾಲ ವೆಂಕಟಪ್ಪ ನಾಯಕನಿಗೆ ಸಿಂಹಾಸನಾರೋಹಣ ಸಮಾರಂಭವನ್ನು ಏರ್ಪಡಿಸಿ, ರಾಜ ಮನೆತನದ ಪದ್ಧತಿಗಳಂತೆ ಆಹ್ವಾನಗಳನ್ನು ಕಳಿಸಿಕೊಟ್ಟು ಉತ್ಸವಗಳನ್ನು ನೆರವೇರಿಸಿ ವೆಂಕಟಪ್ಪ ನಾಯಕನನ್ನು ಸಿಂಹಾಸನದ ಮೇಲೆ ಕುಡಿಸಲಾಯಿತು. ದರ್ಬಾರ ರಾಜ ಮರ್ಯಾದೆಗಳಿಗನುಸಾರವಾಗಿ ಕಾಣಿಕೆ, ಮುಜರೆ ಎಲ್ಲವೂ ಸಕ್ರಮವಾಗಿ ನೆರವೇರಿಸಿದ್ದರಿಂದ ಎಲ್ಲರಿಗೂ ಸಂತೋಷವಾಯಿತು. ಟೇಲರನು ಬಾಲ ವೆಂಕಟಪ್ಪ ನಾಯಕನಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಡಾ. ಮರ್‍ರೆಯವರನ್ನು ನೇಮಿಸಿದನು. ವೆಂಕಟಪ್ಪ ನಾಯಕ ಇಂಗ್ಲೀಷ್‌ನ ಜೊತೆಗೆ ತೆಲುಗು, ಮರಾಠಿ, ಫಾರಸಿ ಭಾಷೆಗಳನ್ನು ಕಲಿತುಕೊಂಡನು.

೧೮೫೩ ರಲ್ಲಿ ರಾಜಾ ವೆಂಕಟಪ್ಪ ನಾಯಕನು ಪ್ರೌಢಾವಸ್ಥೆ ತಲುಪಿದನು. ಸುರಪುರ ಸಂಸ್ಥಾನದ ಅಧಿಕಾರ ಆತನಿಗೆ ಒಪ್ಪಿಸಬೇಕೆಂದು, ರೆಸಿಡೆಂಟನು ಆಂಗ್ಲ ಸರಕಾರಕ್ಕೆ ತಿಳಿಸಿದನು. ರಾಜ್ಯವನ್ನು ಒಪ್ಪಿಸಿದರೂ, ರಾಜಕೀಯ ಪ್ರತಿನಿಧಿಯಾಗಿ ಟೇಲರನು ಮುಂದುವರೆಯುವುದು ಒಳ್ಳೆಯದೆಂದು, ಅದಕ್ಕಾಗಿ ಆತನಿಗೆ ಸಂಸ್ಥಾನದಿಂದ ೧,೫೦೦ ರೂಪಾಯಿ ಸಂಬಳ ಕೊಡಬೇಕೆಂಬ ವಿಚಾರವನ್ನು ತಿಳಿಸಿದರು. ಬಾಲ ವೆಂಕಟಪ್ಪನಾಯಕನಿಗೆ ಟೇಲರನ ಮೇಲೆ ಪ್ರೀತಿ ವಿಶ್ವಾಸಗಳಿದ್ದರೂ ಪ್ರತಿ ತಿಂಗಳ ಸಂಸ್ಥಾನದಿಂದ ಅಷ್ಟೊಂದು ಹಣ ರಾಜ್ಯಬೊಕ್ಕಸದಿಂದ ಕೊಡಲು ಅಸಾಧ್ಯವಾಗಿತ್ತು. ಇದನ್ನು ಸ್ವತಃ ರಾಜನೇ ಟೇಲರನ ಮುಂದೆ ಸ್ಪಷ್ಟ ಪಡಿಸಿದಾಗ ಟೇಲರನು ಸಹ ಮೇಲಿನ ಅಧಿಕಾರಿಗಳಿಗೆ ಪತ್ರ ಬರೆದನು. ಅನ್ಯ ಮಾರ್ಗವಿಲ್ಲದೆ ಆಂಗ್ಲ ಸರಕಾರ ರಾಜ್ಯದ ಅಧಿಕಾರವನ್ನು ಹಸ್ತಾಂತರಿಸಲು ಟೇಲರನಿಗೆ ಸೂಚಿಸಿತು. ೧೮೫೩ ಜೂನ್ ೩೦ ರಂದು ಟೇಲರನು ರಾಜನಿಗೆ ಹೂ ಮಾಲೆ ಹಾಕಿ 'ರಾಜಮುದ್ರೆ'ಯನ್ನು ಒಪ್ಪಿಸಿದನು. ಈ ಸಂದರ್ಭದಲ್ಲಿ ಸಂತೋಷ ವ್ಯಕ್ತಗೊಳಿಸಲು ತೋಪುಗಳು ಹಾರಿಸಲ್ಪಟ್ಟವು. ವೆಂಕಟಪ್ಪ ನಾಯಕನು ಟೇಲರನ ವಾಸಕ್ಕಾಗಿ ಕಟ್ಟಿಕೊಂಡ ಬಂಗಲೆಯನ್ನು ೨೦ ಸಾವಿರ ರೂಪಾಯಿಗಳಿಗೆ ಖರೀದಿಸಿ ಆತನನ್ನು ಸಕಲ ಮರ್ಯಾದೆಗಳೊಂದಿಗೆ ಬೀಳ್ಕೊಟ್ಟನೆಂದು ದಾಖಲೆಗಳಿಂದ ನಮಗೆ ತಿಳಿದು ಬರುತ್ತದೆ.

ರಾಜಾ ವೆಂಕಟಪ್ಪ ನಾಯಕನು ೧೮೫೩–೧೮೫೭ ರವರೆಗೆ ನಾಲ್ಕು ವರ್ಷಗಳ ಕಾಲ ಸ್ವತಂತ್ರವಾಗಿ ಆಡಳಿತ ನಡೆಸಿದನು. ಈ ಸಂದರ್ಭದಲ್ಲಿ ಭಾರತದ ಉತ್ತರ ಭಾಗಗಳಲ್ಲಿ ಸ್ವಾತಂತ್ರ್ಯ ಚಳವಳಿಯ ಕಿಡಿಯು ಹೊತ್ತಿಕೊಂಡು ಉರಿಯತೊಡಗಿತ್ತು. ಒಂದು ಕಡೆ ಸ್ವಾತಂತ್ರ್ಯ ವೀರರು ಆತ್ಮಾರ್ಪಣೆ ಮಾಡುತ್ತಿದ್ದರೆ, ಮತ್ತೊಂದು ಕಡೆ ವೈರಿಗಳಾದ ಬ್ರಿಟಿಷ ಮತ್ತು ನಿಜಾಮರ ಅಪವಿತ್ರ ಮೈತ್ರಿ ಕುತಂತ್ರಗಳಿಂದಲೂ ಜನರು ನೊಂದಿದ್ದರು. ಆಗ ಸುರಪುರ ಸಂಸ್ಥಾನದ ಆರ್ಥಿಕ ಸ್ಥಿತಿ ಚಿಂತಾಜನಕವಾಗಿತ್ತು. ಅದೇ ಸಮಯದಲ್ಲಿ ಲಾರ್ಡ ಡಾಲ್ ಹೌಸಿ ದರ್ಪ, ದುರಂಹಕಾರವುಳ್ಳ ಪತ್ರ ಬರೆದು ಇಪ್ಪತ್ತು ಸಾವಿರ ರೂಪಾಯಿ ವಾರ್ಷಿಕವೇತನದ ಮೇಲೆ ಒಬ್ಬ ರಾಜಕೀಯ ಸಲಹೆಗಾರನ್ನು ಇರಿಸಿಕೊಳ್ಳಬೇಕೆಂದು ಆಗ್ರಹಿಸಿದನು. ಇದರಿಂದ ಯುವ ತರುಣ ರಾಜಾ ವೆಂಕಟಪ್ಪನಾಯಕನಿಗೆ ಸಿಟ್ಟು ಬರಲು ಕಾರಣವಾಯಿತು. ಅಷ್ಟೇ ಅಲ್ಲದೇ ಅವರ ನೀತಿಗೆ ಖಾರವಾಗಿ ಪ್ರತಿಕ್ರಿಯಿಸಿ ಈ ನಿಯಮವನ್ನು ಅನುಸರಿಸಲು ಸಾಧ್ಯವಿಲ್ಲ ಎಂದು ಪ್ರತ್ಯೋತ್ತರ ಕೊಟ್ಟನು.

ಈ ಕಾರಣದಿಂದಾಗಿ ಸುರಪುರ ಸಂಸ್ಥಾನ ಬ್ರಿಟಿಷರ ಕೆಂಗೆಣ್ಣಿಗೆ ಗುರಿಯಾಯಿತು. ಬ್ರಿಟಿಷರ ಈ ನೀತಿಯ ವಿರುದ್ಧ ಅಸಮಾಧಾನ ಹೊಂದಿದ್ದ ವೆಂಕಟಪ್ಪನಾಯಕ ಆಂಗ್ಲರನ್ನು ಹೊಡೆದೊಡಿಸುವ ಸಂಕಲ್ಪವನ್ನು ತೊಟ್ಟು, ಸ್ಥಳೀಯ ನಾಯಕರ ಸಹಾಯ ಹಸ್ತ ಕೇಳಿದನು. ಇದಕ್ಕೆ ನಾನಾ ಸಾಹೇಬ ಮತ್ತು ಸ್ಥಳೀಯ ಜಮೀನ್ದಾರರು ಸಹಾಯಕ್ಕೆ ನಿಲ್ಲುವುದಾಗಿ ತಿಳಿಸಿದ್ದರು. ಇವರುಗಳೆಲ್ಲರೂ ಬ್ರಿಟಿಷ್ ಸೈನ್ಯದ ಸಿಪಾಯಿಗಳನ್ನು ದಂಗೆಯೆಳುವಂತೆ ಪ್ರೇರೇಪಿಸಿದರು. ಈ ಪಿತೂರಿ ಬ್ರಿಟಿಷರಗೆ ತಿಳಿದು ಸುರಪುರ ಮತ್ತು ಈ ದಂಗೆಯ ನಾಯಕ ವೆಂಕಟಪ್ಪನಾಯಕನನ್ನು ಕೈವಶ ಮಾಡಿಕೊಳ್ಳಲು ಯತ್ನಿಸಿದರು. ಅದರಂತೆ ಕ್ರಿ.ಶ. ೧೮೫೮ರಲ್ಲಿ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ನ್ಯೂಬೇರಿ ನೇತೃತ್ವದಲ್ಲಿ ಶಸ್ತ್ರಸಜ್ಜಿತ ಸೈನ್ಯದೊಂದಿಗೆ ಸುರಪುರದ ಮೇಲೆ ಮುತ್ತಿಗೆ ಹಾಕಿದನು. ಸುರಪುರದ ಸಮೀಪ ವೆಂಕಟಪೂರ ಬಳಿ ಭೀಕರ ಯುದ್ಧ ಆರಂಭವಾಯಿತು. ಸುರಪುರದ ಸೈನ್ಯ ಶೌರ್ಯದಿಂದ ಹೋರಾಡಿ ಬ್ರಿಟಿಷರ ಸೈನ್ಯವನ್ನು ತತ್ತರಿಸುವಂತೆ ಮಾಡಿದರು. ಈ ಯುದ್ಧದಲ್ಲಿ ಸ್ವತ: ವೆಂಕಟಪ್ಪನಾಯಕನೇ ಭಾಗವಹಿಸಿ ವೀರಾವೇಶದಿಂದ ಹೋರಾಡಿದನು. ಸುರಪುರ ಸೈನ್ಯವು ಆಂಗ್ಲರ ಸೈನ್ಯದ ಮೇಲೆ ಹಿಡಿತ ಸಾಧಿಸಿ ಬ್ರಿಟಿಷ ಸೇನಾಧಿಕಾರಿಯಾದ ಕ್ಯಾಪ್ಟನ್ ನ್ಯೂಬೇರಿಯ ರುಂಡವನ್ನು ಕತ್ತರಿಸುವ ಮೂಲಕ

ಬ್ರಿಟಿಷರ ವಿರುದ್ಧ ವಿಜಯ ಸಾಧಿಸಿ ಸಂಭ್ರಮಿಸಿದರು. ಈ ವಿಜಯದ ಸವಿ ನೆನಪಿಗಾಗಿ 'ಸುರಪುರ ವಿಜಯೋತ್ಸವ' ಎಂಬ ಕಾರ್ಯಕ್ರಮವನ್ನು ಇಂದಿಗೂ ಸುರಪುರ ಸಂಸ್ಥಾನವು ಪ್ರತಿವರ್ಷ ಫೆಬ್ರುವರಿ ೦೮ ರಂದು ಆಚರಿಸಲಾಗುತ್ತದೆ.

ಬ್ರಿಟಿಷರ ಕುತಂತ್ರಗಳನ್ನು ಅರಿತ್ತಿದ್ದ ರಾಜಾ ವೆಂಕಟಪ್ಪನಾಯಕನಿಗೆ ಪುಣೆ, ಸತಾರ, ಕೊಲ್ಲಾಪುರದ ಮರಾಠರು, ನರಗುಂದದ ಬಾಬಾ ಸಾಹೇಬ, ಮುಂಡರಗಿಯ ಭೀಮರಾಯ, ಹಲವು ದೇಸಾಯಿ, ದೇಶಮುಖರು, ಜಮೀನ್ದಾರರು ಬೆಂಬಲವಾಗಿ ನಿಂತು ೧೨ ಸಾವಿರ ಬೇಡರ ಪಡೆಯ ನಾಯಕತ್ವ ವಹಿಸಿಕೊಳ್ಳಲು ಪ್ರೋತ್ಸಾಹಿಸಿದರು. ಮೊದಲ ಯುದ್ಧದಲ್ಲಿ ಸೋತ ಬ್ರಿಟಿಷರು ೨ನೇ ಬಾರಿಗೆ ಅಪಾರ ಸೈನ್ಯದೊಂದಿಗೆ ಆಗಮಿಸಿ ಸುರಪುರದ ಹೊರವಲಯದಲ್ಲಿ ಬೀಡುಬಿಟ್ಟಿತು. ವೆಂಕಟಪ್ಪನಾಯಕನ ಪಡೆಗಳು ರಾತ್ರೋರಾತ್ರಿ ಆಕ್ರಮಣ ಮಾಡಿದವು. ಹೆಚ್ಚಿನ ಸೈನ್ಯ ತರಿಸಿಕೊಂಡಿದ್ದ, ಬ್ರಿಟಿಷರು ಎದುರಾಳಿ ಸೈನ್ಯದ ವಿರುದ್ಧ ಆಕ್ರಮಣಕಾರಿ ಯುದ್ಧ ಆರಂಭಿಸಿತ್ತು. ಸುರಪುರದ ಸೈನಿಕರು ಎತ್ತರದ ಪ್ರದೇಶದಲ್ಲಿ ಅವಿತ್ತು ಗೇರಿಲ್ ಯುದ್ಧ ಮಾಡತೊಡಗಿದರು. ನಂಬಿಗೆಯ ಬಂಟನಗಿದ್ದ ವಾಗಣಗೇರಿ ಭೀಮರಾಯ ಬ್ರಿಟಿಷರ ಮೋಸದ ಬಲೆಗೆ ಬಿದ್ದನು. ಸುರಪುರದ ಕೋಟೆಯ ಒಳಗೆ ಹೋಗುವ ಸುಲಭದ ದಾರಿ ತೋರಿಸಿದನು. ತನ್ನ ನಾಯಕ ಬ್ರಿಟಿಷರ ಬಂಧಿಯಾಗಿದ್ದಾನೆಂದು ಮತ್ತು ಸುರಪುರ ಸೈನ್ಯ ಯುದ್ಧ ಮುಂದುವರಿಸಬಾರದೆಂದು ವೆಂಕಟಪ್ಪನಾಯಕ ತಪ್ಪಿಸಿಕೊಂಡು ಹೋಗುವಂತೆ ಸೂಚಿಸಿದ್ದಾರೆಂದು ಸೈನ್ಯದಲ್ಲಿ ಸುಳ್ಳು ಸುದ್ಧಿ ಹರಡಿದನು. ಈ ಕುತಂತ್ರವನ್ನು ತಿಳದ ರಾಜಾ ವೆಂಕಟಪ್ಪನಾಯಕ ತನ್ನ ಸೈನ್ಯದೊಂದಿಗೆ ಹೈದ್ರಾಬಾದ್ ಕಡೆ ಪಯಣ ಸಾಗಿಸಿದನು. ಮಾರ್ಗ ಮಧ್ಯೆ ವೆಂಕಟಪ್ಪನಾಯಕನನ್ನು ಬಂಧಿಸಿದ ಬ್ರಿಟಿಷರು ಹೈದ್ರಾಬಾದ್ ಜೈಲಿನಲ್ಲಿ ಇರಿಸಿದರು. ಈ ಸುದ್ಧಿ ತಿಳಿದ ಮೆಡೋಸ್ ಟೇಲರ್ ಹೈದ್ರಾಬಾದ್‌ಗೆ ಬಂದು ವೆಂಕಟಪ್ಪನಾಯಕನನ್ನು ಬೇಟಿಯಾದನು. ಸುಮಾರು ೪ ವರ್ಷಗಳ ನಂತರ ಹೈದ್ರಾಬಾದ್‌ನಿಂದ ವೆಂಕಟಪ್ಪನಾಯಕನನ್ನು ಮದ್ರಾಸ್ ಪ್ರಾಂತ್ಯದ ಚೆಂಗಲ್‌ಪೆಟ್ ಕೋಟೆಯಲ್ಲಿರಿಸಬೇಕೆಂದು ತೀರ್ಮಾನಿಸಿ ಪಿಕ್ಲಲ್ ಎಂಬ ಬ್ರಿಟಿಷ ಅಧಿಕಾರಿ ನೇತೃತ್ವದಲ್ಲಿ ಅಲ್ಲಿಗೆ ಸಾಗಿಲಾಯಿತು. ದಾರಿಯಲ್ಲಿ ಬೆಳಗಿನ ಜಾವ ಉಪಹಾರಕ್ಕಾಗಿ ಸಿಕಂದರಾಬಾದಿನ ಅಂಬರಪೇಟೆಯಲ್ಲಿ ಡೇರೆ ಹಾಕಿದ್ದರು. ಪಿಕ್ಲಲ್ ತನ್ನ ಪಿಸ್ತೂಲ್ ಅಲ್ಲಿ ಬಿಟ್ಟು ಮುಖ ತೊಳೆಯಲು ಹೋದನು. ಅಷ್ಟರಲ್ಲಿ ಡೇರೆಯೊಳಗೆ ಗುಂಡು ಹಾರಿದ ಶಬ್ಧ ಬಂದಿತು. ವೆಂಕಟಪ್ಪನಾಯಕ ರಕ್ತದ ಮಡುವಿನಲ್ಲಿ ಬಿದ್ದಿದ್ದನು. ಕಲ್ಯಾಣ ಕರ್ನಾಟಕದ ಪ್ರಮುಖ ಸಂಸ್ಥಾನದ ಅಧಿಪತಿ, ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ದಕ್ಷಿಣದವರೆಗೆ ವಿಸ್ತರಿಸಿದ ಯುವ ರಾಜ ಅಸ್ತಂಗತನಾದನು. ತಾಂತ್ಯಾ ಟೋಪಿ, ಝಾನ್ಸಿರಾಣಿ ಲಕ್ಷೀಬಾಯಿಯಂತೆ ಇತಿಹಾಸ ಪುಟ ಸೇರಿದರು. ಆದರೆ ರಾಜಾ ವೆಂಕಟಪ್ಪನಾಯಕ ಇತಿಹಾಸದ ಪುಟಗಳಿಂದ ಹೊರಬರಲಿಲ್ಲ. ಅವರದು ಹತ್ಯೆಯೋ, ಆತ್ಮಹತ್ಯೆಯೋ ಎಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ. ಏಕೆಂದರೆ ವೆಂಕಟಪ್ಪನಾಯಕ ಹತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿಯಾಗಿರಲಿಲ್ಲ. ಬ್ರಿಟಿಷರ ಕುಟೀಲ ತಂತ್ರದಿಂದ ಗುಂಡುಹಾಕಿ ಕೊಲೆಮಾಡಿದರು ಎಂದು ಹೇಳಲಾಗಿದೆ.

ಇತ್ತಿಚಿಗೆ ರಾಜಾ ವೆಂಕಟಪ್ಪನಾಯಕನ ಸಮಾಧಿ ಸಿಕಂದರಬಾದ್‌ನಲ್ಲಿ ಸೈನಿಕರು ವಾಸಿಸುವ ಪ್ರದೇಶದಲ್ಲಿ ಇದೆ ಎಂಬ ಅಂಶವನ್ನು ಭೀಮರಾಯನಗುಡಿಯ ಸುರಪುರ ಸಂಸ್ಥಾನ ಇತಿಹಾಸ ಸಂಶೋಧನಾ ಕೇಂದ್ರ ಇದನ್ನು ಪತ್ತೆ ಮಾಡಿದೆ. 'ಇತಿಹಾಸಕಾರರು ಹೇಳುವ ಪ್ರಕಾರ ರಾಜನನ್ನು ಅಂಬಾರಪೇಟದಲ್ಲಿ ಕೊಲ್ಲಿಸಿದ ನಂತರ ಶವವನ್ನು ಪಂಚನಾಮೆ ಮಾಡಲು ಇಲ್ಲಿನ ಆಸ್ಪತ್ರೆಗೆ ತಂದಿದ್ದಾರೆ. ಸುಮಾರು ೧ ಸಾವಿರ ಎಕರೆ ಪ್ರದೇಶದಲ್ಲಿರುವ ಸ್ಮಶಾನ (ಸಿಮೆಟ್ರಿ–೧೨) ದಲ್ಲಿ ಅಂತ್ಯಸಂಸ್ಕಾರ ಮಾಡಿದ್ದಾರೆ. ಅದರಲ್ಲಿ ವ್ಯಕ್ತಿಯ ಹೆಸರು, ವಿವರವಾದ ಮಾಹಿತಿಯನ್ನು ದಾಖಲಿಸಿದ್ದಾರೆ' ಎಂದು ವಿವರಿಸಿದ್ದಾರೆ. ರಾಜಾ ವೆಂಕಟಪ್ಪನಾಯಕರ ಸಮಾಧಿ, ಪೋಸ್ಟ್ ಮಾರ್ಟಮ್ ವರಧಿ ಬಳಿಕ ರಾಜನ ಸಾವಿನ ಗೊಂದಲ ನಿವಾರಣೆ ಆಗಲಿದೆ ಎಂದು ಭಾಸ್ಕರರಾವ್ ಮೂಡಬೂಳ, ನಿರ್ದೇಶಕ, ಸುರಪುರ ಸಂಸ್ಥಾನ ಇತಿಹಾಸ ಸಂಶೋಧನಾ ಕೇಂದ್ರ ಭೀಮರಾಯನಗುಡಿ ಇವರು ಪತ್ರಿಕೆ ಹೇಳಿಕೆ ನೀಡಿದ್ದಾರೆ. ಹೀಗೆ ೧೮೫೭ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಕ್ಷಿಣದ ನೇತೃತ್ವ ವಹಿಸಿದ ರಾಜಾ ವೆಂಕಟಪ್ಪನಾಯಕನು ಸ್ಥಳೀಯ ನಾಯಕರನ್ನು ಒಂದುಗೂಡಿಸಿ, ಬ್ರಿಟಿಷರನ್ನು ದೇಶದಿಂದ ಹೊಡೆದೋಡಿಸಬೇಕೆಂಬ ಮಹಾ ಸಂಕಲ್ಪದಿಂದ ತನ್ನೆಲ್ಲಾ ಸರ್ವಸ್ವವನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಿ ತನ್ನ ಕನಸು ನನಸಾಗುವ ಮೊದಲೇ ಹುತಾತ್ಮನಾದನು.

"ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು ಆದರೆ ಬೇಡರಿಗಿಂತ ಶೂರರು ದೊರೆಯಲಾರರು"

- ವಿಲಿಯಂ ಸ್ಮಿತ್

**ಪರಾಮರ್ಶನ ಗ್ರಂಥಗಳು:**

**೧.** ಅಮರೇಶ ಯತಗಲ್, "ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು, ಪಲ್ಲವಿ ಪಬ್ಲಿಕೇಷನ್, ಕಸಬಾ, ಲಿಂಗಸೂಗೂರು, ೨೦೧೮.

**೨.** ಅಮರೇಶ ಯತಗಲ್, "ಚಾರಿತ್ರಿಕ ಸುರಪುರ, ಅಧ್ಯಯನಾತ್ಮಕ ನೋಟಗಳು," ಪಲ್ಲವಿ ಪಬ್ಲಿಕೇಷನ್, ಕಸಬಾ, ಲಿಂಗಸೂಗೂರು, ೨೦೧೮.

**೩.** ಕೊಟ್ರೇಶ ಎಂ (ಸಂ), "ಕಲ್ಯಾಣ ಕರ್ನಾಟಕದ ಅರಸು ಮನೆತನಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

**೪.** ಶಂಕರನಾರಾಯಣ ರಾವ್ ಎನ್. ಪಿ., "ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು", ಪ್ರಕಾಶಕರು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು.

**೫.** ರಂಗರಾಜು ದೇವಿಂದ್ರಪ್ಪ, "ಸುರಪುರ ಸಂಸ್ಥಾನದ ಇತಿಹಾಸ", ಪ್ರಸಾರಾಂಗ, ಕ.ವಿ.ಧಾರವಾಡ, ೨೦೦೨.

**೬.** ಕೃಷ್ಣರಾಯರು ಕಪಟರಾಳ, "ಸುರಪುರ ಸಂಸ್ಥಾನದ ಇತಿಹಾಸ", ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು,೨೦೦೫.

**೭.** ಡಾ. ಹನುಮಂತಪ್ಪ ತಾರಿಹಳ್ಳಿ, "ನಾಯಕರ ಮಹಾಸಂಸ್ಥಾನ ಸುರಪುರ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

**೮.** ಪ್ರೊ. ಕುಷ್ಟಗಿ ವಸಂತ, "ಸುರಪುರದ ದೊರೆ ವೆಂಕಟಪ್ಪ ನಾಯಕ", ಶ್ರೀಬತ್ತೇರೇಶ ಪ್ರಕಾಶನ, ಗುಲಬರ್ಗಾ, ೨೦೧೧.

**೯.** ಮೂಲ:ಫ್ರಾಮುರ್ಜ ಜಂಗ್ ಬಹದ್ದೂರ, ಕನ್ನಡಕ್ಕೆ ಪಾಟೀಲ ರಂಗನಗೌಡ ಹೆಚ್., "ಸುರಪುರ ಒಂದು ಪ್ರಾಚೀನ ಬೇಡರ ರಾಜ್ಯ", ಶ್ರೀ ಸಪ್ತಗಿರಿ ಪ್ರಕಾಶನ, ದೇವದುರ್ಗ, ೨೦೨೧.